ಭದ್ರಾ ಅಭಯಾರಣ್ಯದಲ್ಲಿ ವಾಸಿಸುವ ಗ್ರಾಮಸ್ಥರನ್ನು ಸ್ಥಳಾಂತರಿಸುವ ಬಗ್ಗೆ

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಭದ್ರ ಅಭಯಾರಣ್ಯವೆಂದು ದಟ್ಟವಾದಂಥ ಅರಣ್ಯ ಪ್ರದೇಶ ಇದೆ. ಈ ಪ್ರದೇಶದಲ್ಲಿ ವಾಸಿಸುವಂಥ ಗ್ರಾಮಸ್ಥರನ್ನು ಸ್ಥಳಾಂತರಿಸಬೇಕೆಂದು ಸರ್ಕಾರದ ಗಮನಕ್ಕೆ ಪದೇ ಪದೇ ತಂದರೂ ಸಹ ಇಲ್ಲಿಯವರೆಗೆ ಯಾವುದೇ ರೀತಿಯ ನಿರ್ಣಯವನ್ನು ಮಾಡಿಲ್ಲ. ಆ ಭಾಗದಲ್ಲಿ ವಾಸಿಸತಕ್ಕಂಥ ಗ್ರಾಮಸ್ಥರಿಗೆ ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂಬುದು ನನ್ನ ಪ್ರಶ್ನೆಯಾಗಿದೆ. ದಿನಾಂಕ 17.11.1993ರಲ್ಲಿ ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರದ ಗಮನಕ್ಕೆ ತರಲಾಗಿದೆ. ಅಲ್ಲಿ 861 ಹೆಕ್ಟೇರ್ ಪ್ರದೇಶದಲ್ಲಿ ದಟ್ಟ ಅರಣ್ಯ ಇದ್ದು, ಅಲ್ಲಿನ ಜನರನ್ನು ಸ್ಥಳಾಂತರಿಸುವುದಕ್ಕೆ 12ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಒಂದು ಪ್ರತಿಯನ್ನು ತಯಾರಿಸಲಾಗಿದೆ. ಅದು ಈಗ ರಾಜ್ಯ ಸರ್ಕಾರದ ಎದುರುಗಡೆ ಇದೆ. ಈಗ ಅಲ್ಲಿ 736 ಕುಟುಂಬಗಳು ವಾಸಿಸುತ್ತಿದ್ದು, ಸರ್ಕಾರ ಅವರಿಗೆ ಯಾವುದೇ ರೀತಿಯ ಸವಲತ್ತುಗಳನ್ನು ಅಂದರೆ ವೈದ್ಯಕೀಯ ಸೌಲಭ್ಯ ಮತ್ತು ವಿದ್ಯುತ್ ಸೌಕರ್ಯ ಅಥವಾ ನಿವೇಶನ ನೀಡುವುದಾಗಲಿ ಅಥವಾ ಆಶ್ರಯ ಮನೆಗಳನ್ನು ವಿತರಣೆ ಮಾಡುವುದಾಗಲಿ ಮಾಡಿಲ್ಲ. ಕನಿಷ್ಪಪಕ್ಷ ಅಲ್ಲಿನ ಜನರಿಗೆ ಪಡಿತರ ವ್ಯವಸ್ಥೆಯಲ್ಲಿ ಆಹಾರಪದಾರ್ಥಗಳು ಸಿಗುವಂಥ ವ್ಯವಸ್ಥೆಯನ್ನು ಇಲ್ಲಿಯವರೆಗೆ ಒದಗಿಸಿ ಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ.

ಉಪಾಧ್ಯಕ್ಷರು : ಮಾನ್ಯ ಸಗೀರ್ ಅಹಮದ್‌ರವರೆ, ಇವತ್ತು ಸದನದ ಕೊನೆ ದಿವಸವಾಗಿರುವುದರಿಂದ ತಾವು ಹೆಚ್ಚು ಸಮಯ ತೆಗೆದುಕೊಳ್ಳದೆ ಸಂಕ್ಷಿಪ್ತವಾಗಿ ಹೇಳಬೇಕು.

ಶ್ರೀ ಎಸ್.ಆರ್. ಲಕ್ಷ್ಮಯ್ಯ (ಬೀರೂರು) : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ವಾಸಿಸತಕ್ಕಂಥ ಜನರಿಗೆ ವಸತಿ ಇಲ್ಲ ಮತ್ತು ಪಡಿತರ ವ್ಯವಸ್ಥೆ ಇಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದು ಎಷ್ಟು ವರ್ಷದಿಂದ ಇದೆ ಎಂಬುದನ್ನು ಅವರೇ ಹೇಳಬೇಕು. ಬಹಳ ವರ್ಷದಿಂದ ಇವರ ಸರ್ಕಾರವೇ ಅಧಿಕಾರದಲ್ಲಿತ್ತು, ಆಗ ಇವರು ಏನು ಮಾಡುತ್ತಿದ್ದರು ? ಇದು ನಮ್ಮ ಕಾಲದಲ್ಲಿ ಉದ್ಭವವಾಗಿರತಕ್ಕಂಥ ಸಮಸ್ಯೆ ಅಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿಚಾರ ನಿಮಗೆ ಬಿಟ್ಟಿದ್ದುದು. ನಾನು ನಿಮ್ಮ ಪೀಠಕ್ಕೆ ಯಾವುದೇ ರೀತಿಯ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಸರ್ಕಾರಕ್ಕೆ ಹತ್ತಾರು ಬಾರಿ ಪ್ರಶ್ನೆ ಮತ್ತು ಗಮನ ಸೆಳೆಯುವ ಸೂಚನೆ ಮೂಲಕ ಅನೇಕ ವಿಷಯಗಳನ್ನು ಕೇಳಿದ್ದೇನೆ, ಆದರೆ ಸರ್ಕಾರ ಇದಕ್ಕೆಲ್ಲಾ ಲಿಖಿತದ ಮೂಲಕ ಉತ್ತರವನ್ನು ಒದಗಿಸಿದ್ದಾರೆ.

ಉಪಾಧ್ಯಕ್ಷರು : ನಮ್ಮ ಕಡೆ ಒಂದು ಗಾದೆಮಾತು ಇದೆ ಏನೆಂದರೆ "ಒಂದು ದುಡ್ಡು ಕೊಟ್ಟು ಹಚ್ಚುವುದು ಎರಡು ದುಡ್ಡು ಕೊಟ್ಟು ಬಿಡಿಸುವುದು" ಅದಕ್ಕೋಸ್ಕರ ತಾವು ಸಂಕ್ಷಿಪ್ತವಾಗಿ ಹೇಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಈಗ ನಾವು ದುಡ್ಡು ಕೊಟ್ಟು ಹಚ್ಚುವುದಕ್ಕೂ ಬರುವುದಿಲ್ಲ, ದುಡ್ಡು ಕೊಟ್ಟು ಬಿಡಿಸುವುದಕ್ಕೂ ಬರುವುದಿಲ್ಲ. ಮಾನ್ಯ ಹಿರಿಯರಾದ

ಮಂಜುನಾಥ್ ರವರು ಅರಣ್ಯ ಸಚಿವರಾಗಿರುವುದು ತುಂಬ ಸಂತೋಷ. ಕಾಡಿನಲ್ಲಿ ವಾಸಮಾಡತಕ್ಕಂಥ ಜನರು ಬಹಳ ಕಷ್ಟದಿಂದ ಇದ್ದಾರೆ. ಕೇಂದ್ರ ಸರ್ಕಾರದಿಂದ 165 ಲಕ್ಷ ರೂಪಾಯಿಗಳು ಸ್ಥಳಾಂತರಿಸುವುದಕ್ಕೋಸ್ಕರ ಹಣವನ್ನು ಬಿಡುಗಡೆ ಮಾಡಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಕಡೆ ಗಮನಕೊಡಬೇಕು. ಆದರೆ, ರಾಜ್ಯ ಸರ್ಕಾರ ಕೇವಲ 20ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಿದೆ. 12.5 ಕೋಟಿ ರೂಪಾಯಿಗಳ ಈ ಒಂದು ಯೋಜನೆಯಲ್ಲಿ ಕೇವಲ 2.5 ಕೋಟಿ ರೂಪಾಯಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಇವತ್ತು ರಾಜ್ಯದಲ್ಲಿ ಸೀಮಿತವಾಗಿರುವ ಅರಣ್ಯವಾಗಲಿ ಅಥವಾ ದೇಶದ ರಿಸರ್ವ್ಡ್ ಫಾರೆಸ್ಟ್ ಆಗಲಿ, ಇಲ್ಲಿ ಸಾಕಷ್ಟು ಅರಣ್ಯ ಪ್ರದೇಶದಲ್ಲಿ ಒತ್ತುವರಿ ನಡೆದಿವೆ ಎಂಬುದರ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಕಾಫಿ ಬೆಳೆಗಾರರ ಮೇಲೆ ಕಾನೂನಿನ ಕ್ರಮ ಜರುಗಿಸುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆ ಅಥವಾ ಖಾಲಿ ಮಾಡಿಸುವುದಕ್ಕೆ ಯೋಚನೆ ಮಾಡುತ್ತಿದೆ ಎಂದು ಹೇಳುತ್ತಿದ್ದಾರೆ. ಅದರ ಮಧ್ಯೆ ಅತಿ ಕಡಿಮೆ ಜಮೀನನ್ನು ಅಕ್ರಮ ಮಾಡಿಕೊಂಡಿರುವ ಬಡವರಿಗೆ ಮತ್ತು ಅತಿ ಶ್ರೀಮಂತರು ಜಮೀನನ್ನು ಅಕ್ರಮ ಮಾಡಿಕೊಂಡಿರುವವರಿಗೆ ಜಮೀನನ್ನು ಖಾಲಿ ಮಾಡಿಸುವುದಕ್ಕೆ ಏನು ಕ್ರಮ ಹಾಕಿಕೊಂಡಿದ್ದೀರಿ?

ಉಪಾಧ್ಯಕ್ಷರು : ಇನ್ನು ಮುಂದೆ ತಾವು ಮಾತನಾಡುವುದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಕಾಡುಗಳಲ್ಲಿ ಅನೇಕ ಕಡೆ ಟ್ರೈಬ್ಸ್ ಎಂಬ ಜನ ವಾಸ ಮಾಡುತ್ತಿದ್ದಾರೆ. ಕೆಲವು ಕಡೆ ದುರಾದೃಷ್ಟವಶಾತ್ ಏನಾಗಿದೆ ಎಂದರೆ, ಈ ಜನರನ್ನು ಕಾಡಿನಿಂದ ಹೊರಗಡೆ ಬಿಡುವುದಕ್ಕೂ ಕೆಲವು ಜನ ತಯಾರಿಲ್ಲ. ನಾನ್ ಗೌರ್ನಮೆಂಟ್ ಆರ್ಗನೈಜೇಷನ್ ರವರು ಏನು ಮಾಡುತ್ತಿದ್ದಾರೆಂದರೆ, ಇವರು ಇದೇ ಸ್ಥಿತಿಯಲ್ಲಿರುಬೇಕೆಂದು ಅವರ ಫೋಟೋಗಳನ್ನು ಹೊರ ದೇಶಗಳಿಗೆ ತೆಗೆದುಕೊಂಡು ಹೋಗಿ ಕೋಟ್ಯಾಂತರ ರೂಪಾಯಿಗಳನ್ನು ಮಾಡಿ ಶ್ರೀಮಂತರಾಗಿದ್ದಾರೆ. ಆದರೆ ಈ ಜನರನ್ನು ಹೊರಕ್ಕೆ ಹೋಗುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ. ನಾವು ಈಗ ಅವರ ಮನಸ್ಸನ್ನು ಒಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದ ನೆರವಿನಿಂದ ಈ ಜನರನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಮನೆಗಳನ್ನೂ ಸಹ ಕಟ್ಟಿಸಿಕೊಡುತ್ತಿದ್ದೇವೆ. ಸಮಾಜ ಕಲ್ಯಾಣ ಇಲಾಖೆಯಿಂದ ಟ್ರೈಬಲ್ ಸಬ್‌ಪ್ಲಾನ್‌ನಲ್ಲಿ ಇವರಿಗೆ ಹಣವನ್ನು ಕೊಡುತ್ತಿದ್ದಾರೆ. ದುರಾದೃಷ್ಟವಶಾತ್ ಇವತ್ತಿನ ದಿವಸ ಅಲ್ಲಿನ ಜನ ಬುದ್ದಿವಂತರಾಗಿಲ್ಲ, ನೀವು ಇಲ್ಲಿಂದ ಹೊರಕ್ಕೆ ಬನ್ನಿ ಎಂದರೆ ಇಲ್ಲ, ನಾವು ಇಲ್ಲಿಯೇ ಇರುತ್ತೇವೆಂದು ಹೇಳುತ್ತಾರೆ. ನಾನು ಮತ್ತು ಮಾನ್ಯ ಸಗೀರ್ ಅಹಮದ್‌ರವರು ಜೊತೆಯಲ್ಲಿ ಹೋಗಿ ಅವರ ಜಿಲ್ಲೆಯಲ್ಲಿ ಎಲ್ಲೆಲ್ಲಿ ಈ ಜನರು ಇದ್ದಾರೆ ಅಲ್ಲಿಗೆ ಹೋಗಿ ಅವರಿಗೆ ಬುದ್ಧಿ ಹೇಳೋಣ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅಲ್ಲಿಗೆ ಹೋಗುವುದಕ್ಕೆ ನನ್ನದೇನೂ ಆತಂಕ ಇಲ್ಲ. ಅಲ್ಲಿರತಕ್ಕಂಥ ಜನ ಜಾಗ ಬಿಟ್ಟುಕೊಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಹೇಳುತ್ತಿರುವ ಹೇಳಿಕೆ ಸರಿಯಲ್ಲ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಯವರು ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಸರಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ನಾನ್ ಗೌರ್ನಮೆಂಟ್ ಆರ್ಗನೈಜೇಶನ್ ಕೆಲವು ಕಡೆ ಇರುವುದರಿಂದ ತೊಂದರೆಯಾಗುತ್ತಿದೆ. ಇದು ತಮಗೆ ಗೊತ್ತಿರುವ ಹಾಗೆ ನಾಗರಹೊಳೆಯಲ್ಲಿಯೂ ಸಹ ಇದೆ. ಈ ಜನಾಂಗಕ್ಕೆ ಏನೇನು ಸವಲತ್ತುಗಳನ್ನು ಕೊಡಬೇಕೋ, ಅದನ್ನೆಲ್ಲಾ ಕೊಡುವುದಕ್ಕೆ ಸರ್ಕಾರ ಮುಂದೆ ಬಂದಿದೆ ಮತ್ತು ಅವರನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ರೈತರು ಬೆಳೆದಂಥ ಪದಾರ್ಥಗಳಿಗೆ ಬೆಲೆ ಕಡಿಮೆಯಾಗಿರುವ ಬಗ್ಗೆ

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಉಪಾಧ್ಯಕ್ಷರೆ, ನಾನು ಈ ವಿಷಯವನ್ನು ಗಮನಸೆಳೆಯುವ ಸೂಚನೆಯಲ್ಲಿ ತರಬೇಕೆಂದು ಇದ್ದೆ, ಆದರೆ ಅದು ಸಾಧ್ಯವಾಗಲಿಲ್ಲ. ಇವತ್ತಿನದಿವಸ ರೈತರ ಸಮಸ್ಯೆ ಬಹಳ ಗಂಭೀರವಾಗಿದೆ. ಈ ವರ್ಷ ರೈತರು ಬೆಳೆದಂತಹ ಎಲ್ಲಾ ಪದಾರ್ಥಗಳು ಬಹಳಷ್ಟು ಕಡಿಮೆಯಾಗಿದೆ. ವಿಶೇಷವಾಗಿ ಉತ್ತರ ಭಾಗದಲ್ಲಿ ಬೆಳೆಯುವಂತಹ ಜೋಳ ಇರಬಹುದು ಅಥವಾ ಗೋಧಿ ಇರಬಹುದು, ಹತ್ತಿ ಇರಬಹುದು, ಇವತ್ತು ಬಹುತೇಕ ಕಡಿಮೆಯಾಗಿದೆ. ಕೇಂದ್ರ ಸರ್ಕಾರ ನಿಗಧಿ ಮಾಡಿರುವ ಕನಿಷ್ಠ ಬೆಲೆ ಏನು ಇದೆ ಅದಕ್ಕಿಂತ ಕಡಿಮೆ, ಬಹಳ ಸಮೀಪ ಇವತ್ತು ರೈತರಿಗೆ ನಷ್ಟವಾಗಿದೆ. ರೈತರು ಬೆಳೆಗೆ ಹಾಕಿರತಕ್ಕಂಥ ಗೊಬ್ಬರ ಮತ್ತು ರಸಾಯನಿಕ ಔಷಧಿಗಳ ಖರ್ಚನ್ನು ನೀಗಿಸುವುದಕ್ಕೂ ಇವತ್ತಿನ ದಿವಸ ಅವರಿಗೆ ಆಗುತ್ತಿಲ್ಲ. ಅಷ್ಟೊಂದು ಬೆಳೆ ನಾಶ ಆಗಿದೆ. ಈ ಒಂದು ಸಮಸ್ಯೆ ಸುಮಾರು ಮೂರು ತಿಂಗಳಿಂದಲೂ ಇದೆ. ಮೊನ್ನೆ ದಿವಸ ಈ ಸದನದಲ್ಲಿ ಹತ್ತಿ ಸಮಸ್ಯೆ ಬಗ್ಗೆ ಚರ್ಚೆಗೆ ಬಂದಿತ್ತು. ಮಾರುಕಟ್ಟೆಯಲ್ಲಿ ಹತ್ತಿ ರಾಶಿ ಇದ್ದರೂ ಸಹ ಮಾರಾಟ ಆಗುತ್ತಿಲ್ಲ. ಹಿಂದೆ ಮೂರು ಸಾವಿರ ಅಥವಾ 2,500 ರೂಪಾಯಿ ಹತ್ತಿ ಬೆಲೆ ಇತ್ತು ಇವತ್ತು 1500 ರಿಂದ 1200 ರೂಪಾಯಿಗೂ ಯಾರು ಕೇಳುವಂತಹ ಸ್ಥಿತಿಯಲ್ಲಿ ಇಲ್ಲ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇವತ್ತು ಮಲಪ್ರಭ ಮತ್ತು ಘಟಪ್ರಭ ನೀರಾವರಿ ಪ್ರದೇಶದಲ್ಲಿ ಗೋವಿನ ಜೋಳ ಅತೀ ಮುಖ್ಯವಾದ ಬೆಳೆಯಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಬೆಂಬಲ ಬೆಲೆ 360 ರೂಪಾಯಿ ಇದ್ದರು, ಈಗ 300 ರೂಪಾಯಿಗೂ ಸಹ ಯಾರು ಕೇಳುತ್ತಿಲ್ಲ. ಹೋದ ವರ್ಷ ಬೆಳೆದಂತಹ ಜೋಳಕ್ಕೆ ಬೆಲೆ ಜಾಸ್ತಿ ಇತ್ತು. ಭತ್ತ, ಹತ್ತಿ ಮತ್ತು ಕಡಲೆ ಬೆಲೆಗಳು ಇವತ್ತು ಬಹಳ ಕುಸಿದು ರೈತರು ಕಂಗಾಲಾಗಿದ್ದಾರೆ. ಇದಕ್ಕೆ ಸರ್ಕಾರ ವಿಶೇಷವಾಗಿ ಮಾನ್ಯ ಕೃಷಿ ಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸಮಸ್ಯೆಗೆ ಏನಾದರೂ ಪರಿಹಾರ ಮಾಡಬೇಕು. ದಕ್ಷಿಣದಲ್ಲಿ ಆಲೂಗಡ್ಡೆ ಅಥವಾ ಟೋಮಟೋ ಬೆಲೆ ಕುಸಿದರೆ, ಅದರ ಪರ್ಯಾಯ ವ್ಯವಸ್ಥೆಗೆ ಸರ್ಕಾರ ಮುಂದೆ ಬಂದು ಆ ಪದಾರ್ಥಗಳನ್ನು ಖರೀದಿ ಮಾಡುವುದಕ್ಕೆ ಹೋಗುತ್ತೀರಿ. ಹಾಗೆಯೇ ಇದನ್ನು ಮಾಡಬೇಕು. ಸುಮಾರು 4 ತಿಂಗಳಿಂದ ಗೋವಿನ ಜೋಳದ ಬೆಲೆ 320, 310, 308, 300 ಈ ರೀತಿಯಾಗಿ ಬಹಳ ಹಿಂದೆ ಹೋಗುತ್ತಿದೆ. ಹತ್ತಿ ಸುಮಾರು ಮೂರು ತಿಂಗಳುಗಳಿಂದ ಸ್ಟಾಕ್ ಬಿದ್ದು, ರೈತರಿಗೆ ಹಣ ಸಿಗುತ್ತಿಲ್ಲ. ಹತ್ತಿ ಮಾರಾಟ ಆಗುತ್ತಿಲ್ಲ. ಆದ್ದರಿಂದ ರೈತರು ಕೈಗೆ ಬಂದ ರೇಟಿಗೆ ಹತ್ತಿಯನ್ನು ಮಾರಾಟ ಮಾಡುತ್ತಿದ್ದಾರೆ. ಸರ್ಕಾರ ಏನು ಮಾಡುತ್ತಿದೆ, ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ಏಕೆ ತರುತ್ತಿಲ್ಲವೆಂದು ನಾನು ಕೇಳುತ್ತಿದ್ದೇನೆ.